**ಸಾಕ್ಷಿಯನ್ನು ದಿಃ 20.11.2023 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ.ವಿ.ಎಸ್.ವಿ ವಕೀಲರಿಂದಃ**

ನಾನು ಎಸ್.ಎಸ್.ಎಲ್.ಸಿ ಓದಿರುತ್ತೇನೆ. ವಾದಿಗಳು ಏನು ಪರಿಹಾರ ಕೋರಿ ಈ ದಾವೆ ಹೂಡಿರುತ್ತಾರೆಂದು ತಿಳಿದುಕೊಂಡಿರುತ್ತೇನೆ. ನನ್ನ ತಾತನ ಹೆಸರು ಮುನಿವೆಂಕಟಪ್ಪ ಬಿನ್ ಮುನಿರಾಮಪ್ಪ ಅಲಿಯಾಸ್ ಜುಟ್ಟಪ್ಪ. ಮುನಿರಾಮಪ್ಪ ಅಲಿಯಾಸ್ ಜುಟ್ಟಪ್ಪ ರವರ ಸಹೋದರರ ಬಗ್ಗೆ ನನಗೆ ಗೊತ್ತಿಲ್ಲ. ಜುಟ್ಟಪ್ಪ, ಈರಪ್ಪ ಮತ್ತು ರಾಮ ಅಲಿಯಾಸ್ ರಾಮಜುಟ್ಟು ರವರು ಮುನಿರಾಮಪ್ಪ ಅಲಿಯಾಸ್ ಜುಟ್ಟಪ್ಪ ಹಾಗೂ ಯಲ್ಲಮ್ಮರವರ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಜುಟ್ಟಪ್ಪ ರವರ ಮಗ ಮುನಿವೆಂಕಟಪ್ಪ ಮತ್ತು ಯಲ್ಲಪ್ಪ ಎಂದರೆ ಸರಿ.

ಮುನಿವೆಂಕಟಪ್ಪರವರಿಗೆ 5 ಜನ ಮಕ್ಕಳು ಎಂದರೆ ಸರಿ. ಅವರಿಗೆ ನನ್ನ ತಂದೆ ರಾಮಕೃಷ್ಣಪ್ಪ , ವೆಂಕಟರಾಮಪ್ಪ, ವೆಂಕಟಸ್ವಾಮಿ , ರಾಮಪ್ಪ ಮತ್ತು ಮುನಿರಾಮಪ್ಪ ಮಕ್ಕಳು ಎಂದರೆ ಸರಿ. ಮೇಲ್ಕಂಡ ಐದು ಜನ ಸಹೋದರರು ಕುಟುಂಬದ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ. ಈಗ್ಗೆ 3 ವರ್ಷಗಳ ಹಿಂದೆ ವಿಭಾಗವಾಗಿರುತ್ತದೆ. ಅದರಂತೆ ಖಾತೆ ಬದಲಾವಣೆ ಆಗಿದೆ. ನನ್ನ ತಾತ ಮುನಿವೆಂಕಟಪ್ಪ ರವರಿಗೆ ಒಟ್ಟು 5 ಎಕರೆ ಜಮೀನು ಇತ್ತು. ಎಂಟು ಸರ್ವೆ ನಂಬರ್ ಗಳಲ್ಲಿ ಸದರಿ ಐದು ಎಕರೆ ಬರುತ್ತದೆ.

ನನ್ನ ಚಿಕ್ಕ ತಾತನಾದ ಯಲ್ಲಪ್ಪ ರವರಿಗೆ ಇಬ್ಬರು ಮಕ್ಕಳು ಅವರುಗಳು ಮುನಿವೆಂಕಟಪ್ಪ ಮತ್ತು ಮುನಿರಾಮ ಎಂದರೆ ಸರಿ. ಈರಪ್ಪ ರವರಿಗೆ 4 ಜನ ಮಕ್ಕಳು ಅವರುಗಳು ಕಾಮಪ್ಪ, ಮುನಿವೆಂಕಟಪ್ಪ, ಚಿಕ್ಕರಾಮಪ್ಪ ಮತ್ತು ವೆಂಕಟರಾಮಪ್ಪ. ಈರಪ್ಪ ರವರಿಗೆ ರಾಮಯ್ಯ, ಮುನಿವೆಂಕಟಪ್ಪ ಮತ್ತು ಕಾಮಣ್ಣ ಎಂಬ ಮೂರು ಜನ ಮಕ್ಕಳು ಎಂದರೆ ಸರಿಯಲ್ಲ. ಈರಪ್ಪ ರವರ ಮಕ್ಕಳು ಮೃತಪಟ್ಟಿರುತ್ತಾರೆ ಎಂದರೆ ಸರಿ. ರಾಮಯ್ಯ ರವರಿಗೆ ಮುನಿವೆಂಕಟಪ್ಪ ಮತ್ತು ವೆಂಕಟರಾಮಪ್ಪ ಎಂಬ ಇಬ್ಬರು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ರಾಮಯ್ಯ ರವರ ಸಹೋದರ ಮುನಿವೆಂಕಟಪ್ಪ ಅಲಿಯಾಸ್ ಗುಡ್ಡಪ್ಪ ರವರಿಗೆ ಒಬ್ಬನೇ ಮಗ

ವೆಂಕಟೇಶಪ್ಪ ಎಂದರೆ ಸರಿ. ವೆಂಕಟೇಶಪ್ಪ ರವರಿಗೆ ಬಸವರಾಜು ಮತ್ತು ಚಿರಂಜೀವಿ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಕಾಮಣ್ಣ ಎಂಬುವವರಿಗೆ ಅಮ್ಮಯಮ್ಮ , ನಂಜಪ್ಪ ಮತ್ತು ರಾಮ ಎಂಬ ಮೂರು ಜನ ಮಕ್ಕಳು ಎಂದರೆ ಸರಿ. ರಾಮಜುಟ್ಟು ರವರು ಯಾರು ಎಂದು ನನಗೆ ಗೊತ್ತಿಲ್ಲ. ಆತನ ಮಗನ ಹೆಸರು ನನಗೆ ಗೊತ್ತಿಲ್ಲ.

ವಾದಿಗಳ ತಂದೆಯ ಹೆಸರು ವೆಂಕಟಪ್ಪ ಎಂದರೆ ಸರಿ. ಮುನಿವೆಂಕಟಪ್ಪ ಅಲಿಯಾಸ್ ಗುಡ್ಡಪ್ಪ ಯಾವ ವರ್ಷದಲ್ಲಿ ಮೃತಪಟ್ಟಿರುತ್ತಾರೆ ಎಂದು ಗೊತ್ತಿಲ್ಲ. ಅವರ ಮಗ ವೆಂಕಟೇಶಪ್ಪ 5 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ದಾವಾಸರ್ವೆ ನಂ. 86 ರಲ್ಲಿ ಜುಟ್ಟಪ್ಪ, ಈರಪ್ಪ, ರಾಮ ಅಲಿಯಾಸ್ ರಾಮ ಜುಟ್ಟು ರವರು ಜಂಟಿ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**sd/-**

**(ಕೇಶವಮೂರ್ತಿ.ಬಿ)**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**

**ಬಂಗಾರಪೇಟೆ**